



ಮಲಪ್ರಭಾ



ದ್ಯುತಿ ಚಾಂದ್

ಅದೆಲ್ಲದರಲ್ಲಿಯೂ ಚೀನಾ, ಜಪಾನ್, ಕೊರಿಯಾದ ಬಲಿಷ್ಠ ಸ್ಪರ್ಧಿಗಳನ್ನು ಹಿಂದಿಕ್ಕಿ ಪಾಯಿಂಟ್ಸ್ ಗಳಿಸುವುದು ಸಾಮಾನ್ಯವಲ್ಲ. 2002 ಮತ್ತು 2006ರಲ್ಲಿ ಕನ್ನಡದ ಹುಡುಗಿ ಶೋಭಾ ಜಾವೂರ್ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಸಾಧನೆ ಮಾಡಿದ್ದರು. ಆದರೆ ಈ ಬಾರಿ ಬಂಗಾಳದ ಜಲಪಾಯ್‌ಗುಡಿಯ ಸ್ವಪ್ನಾ ಬರ್ಮನ್ ಚಿನ್ನದ ಬೇಟೆಯಾಡಿದ್ದಾರೆ.

ಜೀವನಪೂರ್ತಿ ಕಷ್ಟದ ಹಾದಿಯಲ್ಲಿಯೇ ಬೆಳೆದ ಈ ಹುಡುಗಿ ಈಗ 'ಚಿನ್ನದ ಕುವರಿ'ಯಾಗಿದ್ದಾಳೆ. ತಗಡಿನ ಶೆಡ್‌ನ ಮನೆ. ಹಾಥ್ ಗಾಡಿ (ಎಳೆಯುವ ಸೈಕಲ್) ಓಡಿಸುವ ಉದ್ಯೋಗ ಮಾಡುತ್ತಿದ್ದ ಅಪ್ಪ ಅನಾರೋಗ್ಯದಿಂದ ಹಾಸಿಗೆ ಹಿಡಿದು ಬಹಳ ದಿನಗಳಾಗಿವೆ. ಸಾಲದ್ದಕ್ಕೆ ಎರಡೂ ಕಾಲುಗಳಲ್ಲಿ ಆರು–ಆರು ಬೆರಳುಗಳು. ಅದಕ್ಕೆ ಸರಿಹೊಂದುವ ಬೂಟುಗಳು ಸಿಗದೇ ಅನುಭವಿಸಿದ ನೋವು ಅವರಿಗೇ ಗೊತ್ತು. ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸುವ ದಿನ ದವಡೆ ಹಲ್ಲಿನ ನೋವು ಕೂಡ ಸ್ವಪ್ನಳ ಜೀವ ಹಿಂಡಿತ್ತು. ಕೆನ್ನೆಗೆ ಪಟ್ಟಿ ಹಚ್ಚಿಕೊಂಡ ಹುಡುಗಿ ಓಟ, ಜಂಪ್ ಮತ್ತು ಥ್ರೋಗಳಲ್ಲಿ ಪಾಯಿಂಟ್ಸ್‌ಗಳನ್ನು ಕೊಳ್ಳೆ ಹೊಡೆದರು. ಈ ವಿಭಾಗದಲ್ಲಿ ಭಾರತಕ್ಕೆ ಮೊದಲ ಚಿನ್ನದ ಕಾಣಿಕೆ ನೀಡಿದರು. ಆಕೆಯ ಮನೆಯಲ್ಲಿ ಟಿ.ವಿ.ಯಲ್ಲಿ ಮಗಳ ಸಾಧನೆ ನೋಡಿದ ಅಮ್ಮ ಬಸನ್ ಬರ್ಮನ್ ಅವರು ಆನಂದಕ್ಕೆ ಪಾರವೇ ಇರಲಿಲ್ಲ. ಅವರ ಸಂಭ್ರಮದ ವಿಡಿಯೋ ವೈರಲ್ ಆಗಿತ್ತು.

ಬಂಗಾಳ ಸರ್ಕಾರವು ಈ ಹುಡುಗಿಗೆ 10 ಲಕ್ಷ ರೂಪಾಯಿ ಬಹುಮಾನ ಘೋಷಿಸಿದ್ದು ಬಹಳಷ್ಟು ಟೀಕೆಗಳಿಗೆ ಗುರಿಯಾಯಿತು. ಇದೇ ಸಂದರ್ಭದಲ್ಲಿ ಸ್ವಪ್ನಾ ಸಹೋದರನಿಗೆ ಉದ್ಯೋಗ ನೀಡುವಂತೆಯೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರವಾಸೋದ್ಯಮ ಇಲಾಖೆಗೆ ಸೂಚಿಸಿದ್ದರು. ಇದರಿಂದ ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವ ಭರವಸೆ ಮೂಡಿದೆ.

## ಛಲಗಾತಿ ದ್ಯುತಿ

ಕಳೆದ ಎರಡು–ಮೂರು ವರ್ಷಗಳಲ್ಲಿ ಒಡಿಶಾದ ದ್ಯುತಿ ಚಾಂದ್ ಅವರ ಹೋರಾಟವೇ ಹೆಚ್ಚು ಸುದ್ದಿಯಾಗಿತ್ತು. ಅವರ ದೇಹದಲ್ಲಿ ಪುರುಷ ಹಾರ್ಮೋನುಗಳ ಪ್ರಮಾಣ ಅಗತ್ಯಕ್ಕಿಂತ ಅಧಿಕವಾಗಿರುವ ಕಾರಣ ಅವರನ್ನು ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸದಂತೆ ನಿರ್ಬಂಧಿಸಲಾಗಿತ್ತು. ಆದರೆ ದ್ಯುತಿ ಧೃತಿಗೆಡಲಿಲ್ಲ. ಕೋರ್ಟ್ ಮೆಟ್ಟಿಲೇರಿದರು. ಹೋರಾಟ ಮಾಡಿದರು. ನ್ಯಾಯ ಅವರ ಪರವಾಗಿತ್ತು. ಮತ್ತೆ ಕಾಲಿಗೆ ಬೂಟು ಧರಿಸಿದರು. ಟ್ರ್ಯಾಕ್‌ಗೆ ಇಳಿದರು. ಆರಂಭದ ಕೆಲವು ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸಿದರೂ ಛಲ ಬಿಡಲಿಲ್ಲ.

ಭಾರತದ ಅಥ್ಲೀಟ್‌ಗಳಿಗೆ ಕಬ್ಬಿಣದ ಕಡಲೆಯಾಗಿರುವ 100 ಮೀಟರ್ ಮತ್ತು 200 ಮೀಟರ್ ಓಟದಲ್ಲಿ ಸಾಧನೆಯ ಹೆಜ್ಜೆಗುರುತು ಮೂಡಿಸಿದರು. ದ್ಯುತಿ, ಏಷ್ಯನ್ ಅಂಗಳದಲ್ಲಿ ಎರಡೂ ವಿಭಾಗಗಳಲ್ಲಿ ಬೆಳ್ಳಿ ಪದಕಗಳನ್ನು ಗೆದ್ದರು. 100 ಮೀಟರ್ ವಿಭಾಗದಲ್ಲಿ ಆಕೆಯ ಓಟ ಅದ್ಭುತವಾಗಿತ್ತು. ಮೊದಲ ಸ್ಥಾನ ಪಡೆದ ಅಥ್ಲೀಟ್‌ಗಿಂತ 0.02 ಸೆಕೆಂಡ್‌ನಷ್ಟು ಹಿಂದಿದ್ದರಷ್ಟೇ.

ಒಡಿಶಾದ ಜೈಪುರ ಜಿಲ್ಲೆಯ ಪುಟ್ಟ ಹಳ್ಳಿಯೊಂದರ ನೇಕಾರ ಕುಟುಂಬದ ಹುಡುಗಿ ದ್ಯುತಿ. ಬಡತನ ರೇಖೆಗಿಂತಲೂ ಕೆಳಗೆ ಇರುವ ಕುಟುಂಬ ಅವರದ್ದು. ಆಕೆಯ ಅಕ್ಕ ಸರಸ್ವತಿ ರಾಜ್ಯಮಟ್ಟದ ಅಥ್ಲೀಟ್ ಆಗಿದ್ದರು. ಅವರನ್ನು ನೋಡಿ ಓಟದಲ್ಲಿ ಆಸಕ್ತಿ ಬೆಳೆಸಿಕೊಂಡ ದ್ಯುತಿ ಈಗ ಭಾರತದ ನಂಬರ್ ಒನ್ ಅಥ್ಲೀಟ್ ಆಗಿದ್ದಾರೆ. ಅವರ ಸಾಧನೆಗಾಗಿ ಒಡಿಶಾ ಸರ್ಕಾರವು 3 ಕೋಟಿ ರೂಪಾಯಿ ಬಹುಮಾನ ಘೋಷಿಸಿದೆ. ಒಡಿಶಾ ಮೈನಿಂಗ್ ನಿಗಮದಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ತುರಮುರಿಯ ಪೋರಿ ಮಲಪ್ರಭ

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಹಳ್ಳಿ ತುರಮುರಿ. ಎರಡೂ ರಾಜ್ಯಗಳ ಭಾಷೆ, ಸಂಸ್ಕೃತಿಗಳ ಸಮ್ಮಿಲನ ಇಲ್ಲಿದೆ. ಕುಸ್ತಿ, ಕಬಡ್ಡಿ, ಸಾಹಸಕ್ರೀಡೆಗಳಲ್ಲಿ ಮಿಂಚುವ ಹಲವು ಸಾಹಸಿಗಳು ಇಲ್ಲಿದ್ದಾರೆ. ಆದರೆ ಈ ಊರಿನ ಹೆಸರು ಮುಂಚೂಣಿಗೆ ಬಂದಿದ್ದು ಇಲ್ಲಿಯ 19ರ ಪೋರಿ ಮಲಪ್ರಭಾ ಜಾಧವ ಅವರಿಂದಾಗಿ.

ಸಣ್ಣ ಜಮೀನಿನಲ್ಲಿ ಕೃಷಿ ಮಾಡಿಕೊಂಡಿರುವ ಯಲ್ಲಪ್ಪ –ಶೋಭಾ ದಂಪತಿಗೆ ನಾಲ್ವರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗ ಇದ್ದಾರೆ. ಮಲಪ್ರಭಾ ಕೊನೆಯ ಮಗಳು. ಮಲಪ್ರಭಾ ಚಿಕ್ಕಂದಿನಲ್ಲಿಯೇ ಜೂಡೊದತ್ತ ಆಕರ್ಷಿತರಾಗಿದ್ದರು. ಬೆಳಗಾವಿಯ ಕೋಚ್ ತ್ರಿವೇಣಿ ಸಿಂಗ್ ಬೆನ್ನೆಲುಬಾಗಿ ನಿಂತರು. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತುದಾರರಾಗಿರುವ ತ್ರಿವೇಣಿ ಅವರು ಕೂಡ ಅಂತರರಾಷ್ಟ್ರೀಯ ಮಟ್ಟದ ಜುಡೊ ಪಟುವಾಗಿದ್ದರು. ಕುರಾಶ್, ಜೂಡೊ ಮಾದರಿಯ ಸಮರ ಕಲೆ.

ಅದನ್ನು ವಿಶೇಷವಾಗಿ ಕಲಿತು ಬಂದಿದ್ದ ತ್ರಿವೇಣಿ ಅವರು ಮಲಪ್ರಭಾಗೆ ಕಲಿಸಿದರು. ಇದೇ ಮೊದಲ ಬಾರಿ ಈ ಕ್ರೀಡೆಯನ್ನು ಏಷ್ಯನ್ ಕ್ರೀಡಾಕೂಟದಲ್ಲಿ ಸೇರ್ಪಡೆ ಮಾಡಲಾಗಿತ್ತು. ಜೋಳದ ರೊಟ್ಟಿ, ಕೆಂಪು ಚಟ್ನಿ, ಮೊಸರು ತಿಂದು ಬೆಳೆದ ಹುಡುಗಿಯ ಕಸುವಿಗೆ ಕೌಶಲದ ಮೆರುಗು ತುಂಬಿದ್ದು ಕೋಚ್‌ಗಳ ಹೆಗ್ಗಳಿಕೆ. ಮಲಪ್ರಭಾ ಕಂಚಿನ ಪದಕ ಗೆದ್ದಾಗಲೇ ಬೆಳಗಾವಿಯಲ್ಲಿ ಈ ಕ್ರೀಡೆಯ ತರಬೇತಿ ನಡೆಯುತ್ತಿರುವುದು ಪ್ರಸಿದ್ಧಗೊಂಡಿದೆ. ಮುಂದಿನ ಮಹತ್ವದ ಸಾಧನೆಗಳ ಕನಸು ಗರಿಗೆದರಿದೆ.

## 'ಮಂದ್ರ'ದ ಪ್ರೇಮಿ ರಾಹಿ

ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಇತಿಹಾಸ ಬರೆದ ರಾಹಿ ಸರ್ನೋಬತ್ ಮಹಾರಾಷ್ಟ್ರದವರು. ರಾಹಿಗೆ ಎರಡೇ ಹವ್ಯಾಸಗಳು. ಒಂದು ಶೂಟಿಂಗ್ ಮತ್ತೊಂದು ಪುಸ್ತಕ ಓದು. ಎಸ್.ಎಲ್. ಭೈರಪ್ಪ ಕಾದಂಬರಿ 'ಮಂದ್ರ' ಅವರಿಗೆ ಇಷ್ಟವಂತೆ. ಅವರು ಯಾವುದೇ ಸ್ಪರ್ಧೆಗೆ ಹೋದರೂ ಒಂದು ಚೀಲದ ತುಂಬ ಕಥೆ, ಕಾದಂಬರಿಗಳ ಪುಸ್ತಕಗಳನ್ನು ಹೊತ್ತೊಯ್ಯುತ್ತಾರೆ. ಅಭ್ಯಾಸ ಮತ್ತು ಸ್ಪರ್ಧೆಯ ನಂತರ ಸಿಗುವ ಸಮಯವನ್ನು ಓದಿನಲ್ಲಿಯೇ ಕಳೆಯುತ್ತಾರೆ.

ಒಂದು ವರ್ಷದ ಹಿಂದೆ ಅವರು ಮೊಣಕೈ ನೋವಿನಿಂದ ಬಳಲಿದ್ದರು. ಆಗ ಶೂಟಿಂಗ್‌ಗೆ ವಿದಾಯ ಹೇಳುವ ಪರಿಸ್ಥಿತಿ ಬಂದಿತ್ತು. ಆದರೆ ಸತತ ಪ್ರಯತ್ನ, ಚಿಕಿತ್ಸೆ ಮತ್ತು ಆತ್ಮವಿಶ್ವಾಸದಿಂದ ಚೇತರಿಸಿಕೊಂಡರು. ಕಣಕ್ಕಿಳಿದು ಚಿನ್ನ ಗೆದ್ದರು. ತಮ್ಮ ಊರಿನವರೇ ಆದ ಶೂಟರ್ ತೇಜಸ್ವಿನಿ ಸಾವಂತ್ ಅವರಿಂದ ಪ್ರೇರಣೆಗೊಂಡು ಕೈಗೆ ಪಿಸ್ತೂಲ್ ಎತ್ತಿಕೊಂಡವರು ರಾಹಿ. 2020ರ ಒಲಿಂಪಿಕ್ಸ್‌ನಲ್ಲಿಯೂ ಪದಕ ಗೆಲ್ಲುವ ಛಲದಲ್ಲಿದ್ದಾರೆ.